ಮುದ ನೀಡಿ ಧೈರ್ಯ ಹೆಚ್ಚಿಸಿತು.

ಸ್ಮಶಾನದ ಮುರಿದು ಬಿದ್ದ ಮರದ ಗೇಟು ನೋಡುತ್ತಾ ಪ್ರದೀಪ ಸಿಗರೇಟ್ ಹತ್ತಿಸಿ ರಸ್ತೆಯಲ್ಲಿಯೇ ನಿಂತಿದ್ದ.

★★★

ತನ್ನ ಮುಂದೆ ಕುಳಿತಿದ್ದ ಕಗ್ಗತ್ತಲಿನ ಆಕೃತಿ ಹೇಳಿದ್ದನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಆತ ವಿಕೃತವಾಗಿ ನಗುತ್ತಾ ಅನಿರೀಕ್ಷಿತವಾಗಿ ಎದ್ದು ನಿಂತಿದ್ದು ಪ್ರದೀಪನನ್ನು ಅಲುಗಾಡಿಸಿಬಿಟ್ಟಿತು. ಸ್ವರ ಮನುಷ್ಯ ಮಾತನಾಡಿದಂತೆಯೇ ಇತ್ತು. ಆದರೆ ಆತ ಹೇಳಿದ್ದೇನು?! ಸತ್ತು ಹನ್ನೆರಡು ವರ್ಷಗಳಾಗಿವೆ! ಸಮಾಧಿಯೊಳಗೆ ಸಖಿ? ರಾತ್ರಿ ಹೊತ್ತಿನಲ್ಲಿ ಗಾಳಿ ಸೇವನೆ!? ಅಂದರೆ!... ಅಂದರೆ?... ಇದು ದೆವ್ವವೇ?

ಪ್ರದೀಪನ ನಶೆಯೆಲ್ಲಾ ಇಳಿದಿತ್ತು. ತಲೆಯಂತೂ ಯೋಚಿಸುವುದನ್ನೇ ಮರೆತಂತಿತ್ತು. ಹೊಟ್ಟೆಯಲ್ಲಿ ತಳಮಳವಾಗುತ್ತಿತ್ತು. ಮೈ ಮನಸ್ಸಿನ ಮೇಲೆ ನಿಯಂತ್ರಣ ಕಳೆದುಕೊಂಡಂತೆ ಭಾಸವಾಯಿತು ಪ್ರದೀಪನಿಗೆ. ದೆವ್ವ! ದೆವ್ವವಿರುವುದು ನಿಜವೆ? ತನ್ನ ಮುಂದೆಯೇ ದೆವ್ವ ಪ್ರತ್ಯಕ್ಷವಾಗಿರುವಾಗ ನಂಬದಿರುವುದಕ್ಕೆ ಸಾಧ್ಯವೇ? ಹುಚ್ಚು ಹಿಡಿಯುತ್ತಿರುವಂತಾಯಿತು ಪ್ರದೀಪನಿಗೆ. ತನ್ನ ಕೊನೆಗಾಲ ಸಮೀಪಿಸಿತೇ? ಸಾಯುವುದಕ್ಕಾಗಿ ಇಷ್ಟು ದೂರ ಬರಬೇಕಿತ್ತೇ? ಏನೋ ಅವ್ಯಕ್ತ ಭೀತಿಗೊಳಗಾದ.

ಮೈಯಲ್ಲಿದ್ದ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ತಲೆಯನ್ನೊಮ್ಮೆ ಕೊಡವಿದ ಪ್ರದೀಪ್. ಅಷ್ಟರಲ್ಲಿ ನರನಾಡಿಗಳೆಲ್ಲಾ ಬಿಗಿದ ಅನುಭವವಾಯಿತು ಆತನಿಗೆ. ಕೈಕಾಲುಗಳು ಸ್ವಾಧೀನ ಕಳೆದುಕೊಂಡಂತಾಯಿತು. ಯೋಚಿಸುವುದರೊಳಗೆ ಆತನ ದೇಹವನ್ನು ನೆಲದಿಂದ ಮೇಲಕ್ಕೆ ಎತ್ತಿದಂತೆ, ದೈತ್ಯ ಶಕ್ತಿಯೊಂದು ಎತ್ತಿಕೊಂಡು ಹೋಗುತ್ತಿರುವಂತೆ, ಅದುಮಿ ಹಿಡಿದಂತೆ, ಉಸಿರು ಕಟ್ಟಿಸಿದಂತೆ ಅನುಭವವಾಯಿತು. ಏನು ಎತ್ತ ಎಂದು ತಿಳಿದುಕೊಳ್ಳಲೂ ಸಾಧ್ಯವಾಗದಂತೆ ಆತನ ದೇಹವನ್ನು ಕ್ಷುದ್ರ ಶಕ್ತಿಗಳು ಹಿಂಡಿ ಹಿಪ್ಪೆ ಮಾಡುತ್ತಾ ಪ್ರಾಣಪಕ್ಷಿ ಇನ್ನೇನು ಹಾರಿಹೋಗುತ್ತಿದೆಯೆಂಬ ಅರಿವು ಬರುತ್ತಿದ್ದಂತೆ ಆತನ ದೇಹವು ತರಗೆಲೆಯಂತೆ ಗಾಳಿಯಲ್ಲಿ ಉರುಳಿ ದೂರಕ್ಕೆ ಹಾರಿ ನೆಲಕ್ಕೆ ಅಪ್ಪಳಿಸಿತ್ತು.

★★★

ಆ ಸುದ್ದಿ ಪತ್ರಿಕೆಗಳಲ್ಲೆಲ್ಲಾ ಪ್ರಸಾರವಾಗಿ ರಾಜ್ಯದಾದ್ಯಂತ ಸಂಚಲನವನ್ನುಂಟು ಮಾಡಿತ್ತು. ಹೆಸರಾಂತ ರಾಜಕಾರಣಿಯೊಬ್ಬರ ತಲೆದಂಡವಾಗಿತ್ತು. ಅಲ್ಲದೆ ಜಿಲ್ಲೆಯ ಪೊಲೀಸರಿಗೆ ಹಲವಾರು ವರ್ಷಗಳಿಂದ ತಲೆನೋವಿಗೆ ಕಾರಣವಾಗಿದ್ದ ಹಲವಾರು ಪ್ರಕರಣಗಳ ಗುಟ್ಟು ರಟ್ಟಾಗಿತ್ತು. ತನ್ನ ಅಸಾಧಾರಣ ಧೈರ್ಯ ಮತ್ತು ಶೌರ್ಯದಿಂದ ಪತ್ರಕರ್ತ ಪ್ರದೀಪ್ ಬಹಳ ನಿಗೂಢ, ಭಯಾನಕವಾಗಿದ್ದ ರಹಸ್ಯವನ್ನು ಭೇದಿಸಿ ನಾಡಿನಾದ್ಯಂತ ಮೆಚ್ಚುಗೆ ಗಳಿಸಿದ್ದ.

ದೆವ್ವವೇ ತನ್ನೆದುರು ಬಂದು ತನ್ನನ್ನು ಶಕ್ತಿಹೀನವಾಗಿಸಿದ್ದು, ತಾನು ನಿಯಂತ್ರಣ ಕಳೆದುಕೊಂಡಿದ್ದರ ಅರಿವಾಗಿತ್ತು ಪ್ರದೀಪನಿಗೆ. ಎತ್ತರದಿಂದ ಎಸೆಯಲ್ಪಟ್ಟಾಗ ಪೊದೆಯ ಮೇಲೆ ಬಿದ್ದಿದ್ದರಿಂದ ಅವನಿಗೆ ಹೆಚ್ಚೇನೂ ಪೆಟ್ಟಾಗಿರಲಿಲ್ಲ. ಆದರೆ ಅಷ್ಟರಲ್ಲಿ ತನ್ನನ್ನು ಹಿಡಿದದ್ದು, ಮೇಲೆತ್ತಿ ಎಸೆದಿದ್ದು ದೆವ್ವವಲ್ಲ, ಬದಲಾಗಿ ಮನುಷ್ಯರ ಒಂದು ಗುಂಪೆಂಬುದು ಅವನಿಗೆ ತಿಳಿದು ಹೋಗಿತ್ತು.

ಅಷ್ಟರಲ್ಲಿ ದೂರದಿಂದ ವೇಗವಾಗಿ ವಾಹನಗಳು ಧಾವಿಸಿ ಬರುತ್ತಿದ್ದ ಸದ್ದಾಯಿತು. ಹೆಡ್‌ಲೈಟ್‌ನ ಪ್ರಖರ ಬೆಳಕು ಕತ್ತಲೆಯನ್ನು ಸೀಳಿ ಮುನ್ನುಗ್ಗುತ್ತಿತ್ತು. ನೋಡ ನೋಡುತ್ತಿದ್ದಂತೆ